ದಿನಾಂಕ 16-10-2023 ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

ಅರ್ಜಿಗಳ ಮೇಲಿನ ಆದೇಶದಂತೆ ಪಾಟೀ ಸವಾಲು ಎದುರುದಾರ ಪರ ಶ್ರೀ.ಹೆಚ್ ಹೆಚ್ ವಕೀಲರಿಂದ:

ನನ್ನ ಮತ್ತು **1** ನೇ ಎದುರುದಾರರ ಮದುವೆಯು ದಿನಾಂಕ **26-09-2010** ರಂದು ಹಾನಗಲ್ ನ ಅರ್ಮಾನ ಹಾಲ್ ನಲ್ಲಿ ಆಗಿದೆ. ನಾನು ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ ಯಲ್ಲಿ ಸಲ್ಲಿಸಿರುವ ಅರ್ಜಿಯನ್ನು ತಯಾರಿಸಲು ಮಾಹಿತಿಯನ್ನು ನಾನೇ ಕೊಟ್ಟಿದ್ದೇನೆ. ನಾನು 7 ನೇ ತರಗತಿ ಓದಿದ್ದೇನೆ. ನನಗೆ ಉರ್ದು ಮಾತ್ರ ಓದಲು ಬರೆಯಲು ಬರುತ್ತದೆ. ನಾನು ಕನ್ನಡ ಮತ್ತು ಉರ್ದುವಿನಲ್ಲಿ ಅರ್ಜಿಗೆ ಮಾಹಿತಿ ಕೊಟ್ಟಿರುತ್ತೇನೆ. ನಮ್ಮದು ಬಡತನದ ಕುಟುಂಬ ಎಂದು ನಾನು ಅರ್ಜಿಯಲ್ಲಿ ಬರೆಯಿಸಿದ್ದೇನೆ ಎಂದರೆ ಸರಿ. ನನ್ನ ಮಾವನ ಹೆಸರು ಮಕ್ಸೂದ ಹನೀಫಸಾಬ. ಅವರು ನನ್ನ ಮದುವೆಯಾದ ಮೂರು ವರ್ಷಗಳಿಗೆ ತೀರಿಕೊಂಡರು. ದಿನಾಂಕ, ತಾರೀಖು ಈಗ ನೆನಪಿಲ್ಲ. ನನಗೂ ಮತ್ತು **1** ನೇ ಎ ದುರುದಾರರರಿಗೂ ಮಕ್ಕಳಾಗದೇ ಇದ್ದ ಕಾರಣ ದಾವಣಗೆರೆಯ ಸಿ ಜೆ ಆಸ್ಪತ್ರೆಯಿಂದ ದತ್ತು ತೆಗೆದುಕೊಂಡೆವು ಎಂದರೆ **1** ನೇ ಎದುರುದಾರರು ಆಸ್ಪತ್ರೆಗೆ ಹೋಗಿ ಮಗು ತೆಗೆದುಕೊಂಡು ಬಂದರು. ನಾನು

ದಾವಣಗೆರೆಯಿಂದ ಹಾನಗಲ್ ಗೆ ಬಂದಾಗ ನನ್ನ ಜೊತೆ ಮಗು ಇರಲಿಲ್ಲ ಎಂದರೆ ಸರಿ. 1 ನೇ ಎದುರುದಾರರೇ ಮಗುವನ್ನು ಕರೆದುಕೊಂಡು ನನ್ನನ್ನು ಒಬ್ಬಂಟಿಯಾಗಿ ಬಿಟ್ಟು ಹೋಗಿದ್ದರು. 2 ತಿಂಗಳ ಮಗುವನ್ನು 1 ನೇ ಎದುರುದಾರರು ತೆಗೆದುಕೊಂಡು ಬಂದಿದ್ದರು, ಅದಕ್ಕೆ ಅಮೀನಾ ಎಂದು ಹೆಸರು ಇಟ್ಟಿದ್ದೇವು. 1 ನೇ ಎದುರುದಾರರು ನನ್ನನ್ನು ಒಬ್ಬಂಟಿಯಾಗಿ ಬಿಟ್ಟು ಹೋಗಿಲ್ಲ, ನಾನೇ ಅವರನ್ನು ಬಿಟ್ಟು ಬಂದಿದ್ದೇನೆ ಎಂದರೆ ಸರಿಯಲ್ಲ. ಮಗು ನನ್ನ ಜೊತೆ ಇಲ್ಲದೇ ಇದ್ದರೂ ಕೂಡ ಅರ್ಜಿಯಲ್ಲಿ ಮಗುವಿನ ಹೆಸರನ್ನು ಸೇರಿಸಿ ಸುಳ್ಳು ಅರ್ಜಿ ಹಾಕಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಮಗು ನನಗೆ ಬೇಕು ಎಂದು ಹೇಳುತ್ತಾರೆ. ಸದರಿ ಮಗುವಿಗೆ ನನ್ನ ಮೇಲೆ ಪ್ರೀತಿ ವಾತ್ಸಲ್ಯ ಇಲ್ಲ ಎಂದರೆ 4 ವರ್ಷ ನಾನ ನನ್ನ ಸ್ವಂತ ಮಗುವಿನ ರೀತಿಯಲ್ಲಿ ಸಾಕಿದ್ದೇನೆ.

2. ನಾನು ನ್ಯಾಯಾಲಯಂದ 1 ನೇ ಎದುರುದಾರರ ಜೊತೆ ರಾಜೀ ಮಾಡಿಕೊಂಡು ಬಾಳುವೆ ಮಾಡಲು ಹೋದಾಗ ಮಗು ನನ್ನ ಹತ್ತಿರ ಬರಲು ಹೆದರುತ್ತಿತ್ತು ಎಂದರೆ ಸರಿಯಲ್ಲ. ಮಗು ಒಂದು ದಿನವೂ ಕೂಡ ಮನೆಗೆ ಬರದೇ ಇದ್ದರೂ ಸಹ ಬಂದಿದ್ದಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಎದುರುದಾರರಿಗೆ 5 ಮಂದಿ ಸಹೋದರರು. ಅವರ ಹೆಸರು ಅಲ್ಲಾಭಕ್ಷ, ನನ್ನ ಗಂಡ, ಮಹ್ಮದ ಅಕ್ರಂ, ಮಹ್ಮದಅಸ್ಲಂ ಮತ್ತು ಮಹ್ಮದಇರ್ಫಾನ್. 1 ನೇ ಎದುರುದಾರರಿಗೆ ಒಟ್ಟು 6 ಜನ ಸಹೋದರಿಯರು. ಅವರ ಹೆಸರು ಕಮಲತಾಜ್, ನರ್ಸಿನ್ ತಾಜ್, ಶಮೀನತಾಜ್, ತಬ್ಬು, ಅಜ್ಜುಮನತಾಜ್. ಇನ್ನೊಬ್ಬರ ಹೆಸರು ಈಗ ನೆನಪಾಗುತ್ತಿಲ್ಲ. ನಾನು ಎದುರುದಾರರ ಮನೆಯಲ್ಲಿ ಯಾರ ಜೊತೆಯಲ್ಲೂ ಹೊಂದಿಕೊಳ್ಳದೇ ಇದ್ದ ಕಾರಣ ನನಗೆ ಅವರ ಹೆಸರುಗಳು ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು 1 ನೇ ಎದುರುದಾರರ ವಿರುದ್ಧ ಈ ಪ್ರಕರಣವನ್ನು ದಾಖಲಿಸಿದ ನಂತರ 1 ನೇ ಎದುರುದಾರರ ಕುಟುಂಬದ ಸದಸ್ಯರು 1 ನೇ ಎದುರುದಾರರನ್ನು ಸಹ ಮನೆಯಿಂದ ಹೊರಗೆ ಹಾಕಿದರು ಎಂದರೆ ಸರಿಯಲ್ಲ. ಮದುವಯಾದ ಎರಡು ವರ್ಷಗಳವರೆಗೆ 1 ನೇ ಎದುರುದಾರರು ನನ್ನನ್ನು ಚೆನ್ನಾಗಿ ನೋಡಿಕೊಂಡಿದ್ದರು ಎಂದು ನಾನು ಅರ್ಜಿಯಲ್ಲಿ ಬರೆಯಿಸಿದ್ದೇನೆ ಎಂದರೆ ಸರಿ. ಎರಡು ವರ್ಷಗಳ ನಂತರ ನಾನು 1 ನೇ ಎದುರುದಾರರು ಮತ್ತು ಅವರ ಕುಟುಂಬಸ್ಥರಿಗೆ ಅಡುಗೆ ಮಾಡಿ ಹಾಕಲು ಬಂದಿಲ್ಲ,

ಪ್ರತ್ಯೇಕವಾಗಿ ಮನೆ ಮಾಡುವಂತೆ 1 ನೇ ಎದುರುದಾರರನ್ನು ಪ್ರತಿ ದಿನ ಪೀಡಿಸುತ್ತಿದ್ದೆ ಎಂದರೆ ಸರಿಯಲ್ಲ. 1 ನೇ ಎದುರುದಾರರು ಮತ್ತು ಅವರ ಕುಟುಂಬದ ಸದಸ್ಯರು ನನ್ನ ಜೊತೆ ಪ್ರತಿ ದಿನ ಜಗಳವಾಡುತ್ತಿದ್ದ ಬಗ್ಗೆ ಪೊಲೀಸ್ ಠಾಣೆಗೆ ಹೋಗಿ ದೂರು ಕೊಡಲು ನನಗೆ ತೊಂದರೆ ಇರಲಿಲ್ಲ ಎಂದರೆ ಸರಿ. ಅಲ್ಲಿ ಯಾವುದೇ ಜಗಳ ಆಗದೇ ಇದ್ದ ಕಾರಣ ಹಾಗೂ ನನ್ನ ತಪ್ಪು ಇದ್ದ ಕಾರಣ ನಾನು ಪೊಲೀಸ್ ಠಾಣೆಗೆ ಯಾವುದೇ ದೂರನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ.

**3.** ನನಗೆ ಮಕ್ಕಳಾಗದೇ ಇರುವ ಕಾರಣ ಎದುರುದಾರರು ನನಗೆ ತೊಂದರೆ ಕೊಡುತ್ತಿದ್ದರು ಎಂದು ಅರ್ಜಿಯಲ್ಲಿ ಹೇಳಿ ಬರೆಯಿಸಿದ್ದೇನೆ. ಮಗುವನ್ನು ದತ್ತು ತೆಗೆದುಕೊಳ್ಳಲು 1 ನೇ ಎದುರುದಾರರು ಮತ್ತು ಅವರ ಮನೆಯ ಎಲ್ಲ ಸದಸ್ಯರ ಒಪ್ಪಿಗೆ ಇತ್ತು. 1 ನೇ ಎದುರುದಾರರು ನನಗೆ ಮುಂಬೈ, ಹುಬ್ಬಳ್ಳಿ, ದಾವಣಗೆರೆ, ಧಾರವಾಡ ಮತ್ತಿತರ ಆಸ್ಪತ್ರೆಗಳಲ್ಲಿ ಮಕ್ಕಳಾಗುವ ಬಗ್ಗೆ ಚಿಕಿತ್ಸೆಯನ್ನು ಕೊಡಿಸಿದರೂ ಸಹ ನನಗೆ ಮಕ್ಕಳಾಗುವುದಿಲ್ಲ ಎಂದು ಗೊತ್ತಾದ ನಂತರವೇ ಮಗುವನ್ನು ದತ್ತು ತೆಗೆದುಕೊಳ್ಳುವ ನಿರ್ಧಾರಕ್ಕೆ ಬಂದೆವು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 2018 ರಲ್ಲಿ ಅಬಾರ್ಷನ್ ಆಗಿತ್ತು ಎಂದು ನುಡಿಯುತ್ತಾರೆ. ಮುಂಬೈಯಲ್ಲಿ ಚಿಕಿತ್ಸೆಗೆ ಹೋಗಿದ್ದೆ. ಸಾಕ್ಷಿ ಮುಂದುವರೆದು ನನ್ನ ಕಾಕಾ ಅಲ್ಲಿಗೆ ಚಿಕಿತ್ಸೆಗೆ ಕಳುಹಿಸಿದ್ದರು ಎಂದು ನುಡಿಯುತ್ತಾರೆ. ಮುಂಬೈಯಲ್ಲಿ ಚಿಕಿತ್ಸೆಯನ್ನು 1 ನೇ ಎದುರುದಾರರು ಕೊಡಿಸಿದ್ದಾರೆ ಎಂದರೆ ನನ್ನ ತಾಯಿ, ನನ್ನ ತಮ್ಮ ಮತ್ತು 1 ನೇ ಎದುರುದಾರರು ನನ್ನ ಜೊತೆ ಬಂದಿದ್ದರು. ನನಗೆ ಮಕ್ಕಳಾಗಲೀ ಎಂಬ ಕಾರಣಕ್ಕಾಗಿ 7-8 ವರ್ಷಗಳ ಕಾಲ 1 ನೇ ಎದುರುದಾರರು ಯಾರು ಯಾವುದೇ ಸಲಹೆಯನ್ನು ನೀಡಿದರೂ ಸಹ ಅದರ ಬಗ್ಗೆ ಪರಿಗಣಿಸಿ ನನಗೆ ಸೂಕ್ತವಾದ ಚಿಕಿತ್ಸೆಯನ್ನು ಕೊಡಿಸಿ ಅದಕ್ಕಾಗಿ ರೂ.10,00,000-00 ವರೆಗೆ ಸಾಲ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಮುಂಬೈ ಆಸ್ಪತ್ರೆಗೆ ಎರಡು ಬಾರಿ ಹೋಗಿದ್ದೆ. ಮುಂಬೈಯ ನನ್ನ ಕಾಕನ ಮನೆಯಲ್ಲಿ 15 ದಿನ ಇದ್ದೆ. 2018 ರಲ್ಲಿ ಯಾವ ತಿಂಗಳು, ತಾರೀಖಿನಂದು ಗರ್ಭಪಾತವಾಯಿತು ಎಂದರೆ ಈಗ ನೆನಪಿಲ್ಲ, ದಾಖಲೆಗಳು 1 ನೇ ಎದುರುದಾರರ ಬಳಿ ಇವೆ. ನನಗೆ ಮಕ್ಕಳಾಗುವುದೇ ಇಲ್ಲ ಎಂದು ವೈದ್ಯರು ಹೇಳಿದ ನಂತರ 2018 ರಲ್ಲಿ ಅಬಾರ್ಷನ್ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ. ಗರ್ಭಪಾತ ಮನೆಯಲ್ಲಿಯೇ ಆಗಿದೆ, ವೈದ್ಯರಾದ ಮನೋಹರ ಶೆಟ್ಟಿ ಎಂಬುವವರಿಗೆ ತೋರಿಸಿದ್ದೇವು.

**4.** ನನಗೆ ಮಕ್ಕಳಾಗಿಲ್ಲ ಎಂಬ ಕಾರಣದಿಂದ ನಾನು ನೊಂದು ಹೋಗಿದ್ದ ಕಾರಣ **1** ನೇ ಎದುರುದಾರರು ನನ್ನನ್ನು ಉಮರಾ ಯಾತ್ರೆಗೆ ಕರೆದುಕೊಂಡು ಹೋಗಿದ್ದರು ಎಂದರೆ ಮಕ್ಕಳಾಗಿಲ್ಲ ಎಂಬ ಕಾರಣಕ್ಕೆ ಕರೆದುಕೊಂಡು ಹೋಗಿಲ್ಲ, ಹಾಗೆಯೇ ಹೋಗಿದ್ದೇವು. ಉಮರಾ ಯಾತ್ರೆಗೆ ಹೋದಾಗ **28** ದಿನ ಇದ್ದೇವು. ಉಮರಾ ಊರು ಸೌದಿ ಅರೇಬಿಯಾದಲ್ಲಿದೆ. ನಾವು ವಿಮಾನದಲ್ಲಿ ಅಲ್ಲಿಗೆ ಹೋಗಿದ್ದೇವು. **1** ನೇ ಎದುರುದಾರರೇ ನನ್ನನ್ನು ಅಲ್ಲಿಗೆ ಕರೆದುಕೊಂಡು ಹೋಗಿದ್ದರು. ನಾನು ಮಕ್ಕಳಿಲ್ಲ ಎಂದು ಮಾನಸಿಕವಾಗಿ ನೊಂದುಕೊಳ್ಳಬಾರದು ಎಂದು **1** ನೇ ಎದುರುದಾರರು ನನ್ನನ್ನು ಸೌದಿ ಅರೇಬಿಯಾದ ಉಮರಾ ಯಾತ್ರೆಗೆ ಕರೆದುಕೊಂಡು ಹೋಗಿದ್ದರು ಎಂದರೆ ಸರಿಯಲ್ಲ.

**5.** ಸಿ ಡಿ ಪಿ ಓ ಕಚೇರಿಯಲ್ಲಿ ಅರ್ಜಿಗೆ ಮಾಹಿತಿಯನ್ನು ನಾನೇ ಕೊಟ್ಟಿದ್ದೇನೆ. ಸದರಿ ಅರ್ಜಿಯನ್ನು ಯಾವ ತಾರೀಖಿನಂದು, ಯಾವ ಅಧಿಕಾರಿಯ ಮುಂದೆ ಕೊಟ್ಟಿದ್ದೇನೆ ಎಂದು ಈಗ ಹೇಳಲಾಗುವುದಿಲ್ಲ. ನಾನು **1** ನೇ ಎದುರುದಾರರ ಮನೆಯನ್ನು ಬಿಟ್ಟು ತವರು ಮನೆ ಸೇರಿಕೊಂಡಾಗಿನಿಂದ **1** ನೇ ಎದುರುದಾರರು ದಾವಣಗೆರೆ ಮತ್ತು ಹಾನಗಲ್ ನಲ್ಲಿ ಹಲವಾರು ಪಂಚಾಯತಿ ಮಾಡಿದರೂ ಸಹ ನಾನು ದಾವಣಗೆರೆಯ **1** ನೇ ಎದುರುದಾರರ ಮನೆಗೆ ಹಿಂತಿರುಗಿ ಹೋಗಿಲ್ಲ ಎಂದರೆ ಸರಿಯಲ್ಲ. ಹಾನಗಲ್ ನಲ್ಲಿ ಮೂರು ಬಾರಿ ಪಂಚಾಯತಿ ನಡೆದಿದ್ದು, ನಾನು ಆ ಮೂರೂ ಪಂಚಾಯತಿಗಳಿಗೆ ಬರುತ್ತೇನೆ ಎಂದು ಹೇಳಿ ಯಾವುದೇ ಕಾರಣ ಇಲ್ಲದೇ ತಪ್ಪಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ದಾವಣಗೆರೆಯಲ್ಲಿ **2018** ರಲ್ಲಿ ನಾಲ್ಕು ಬಾರಿ ಪಂಚಾಯತಿಯಾಗಿದ್ದು, ನನ್ನ ತವರು ಮನೆಯವರು ನನ್ನನ್ನು ಕಳಹಿಸಿಕೊಡುತ್ತೇನೆ ಎಂದು ಹೇಳಿದರೂ ಸಹ ನಾನು ಯಾವುದೇ ಪಂಚಾಯತಿಯಲ್ಲಿ ಭಾಗವಹಿಸಿಲ್ಲ ಎಂದರೆ ಸರಿಯಲ್ಲ. ದಾವಣೆಗೆರೆಯಲ್ಲಿ ಒಂದು ಬಾರಿ ಮಾತ್ರ ಪಂಚಾಯತಿಯಾಗಿದ್ದೆ ದಾವಣಗೆರೆಯಲ್ಲಿ ನಾಲ್ಕು ಬಾರಿ ಪಂಚಾಯತಿ ಆಗಿದ್ದರೂ ಸಹ ನಾನು ಬರುತ್ತೇನೆ ಎಂದು ಹೇಳಿ ತಪ್ಪಿಸಿಕೊಂಡಿದ್ದರೂ ಸಹ ಕೇವಲ ಒಂದು ಬಾರಿ ಪಂಚಾಯತಿಯಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ **22-10-2019** ರಂದು **1** ನೇ

ಎದುರುದಾರರು ದಾವಣಗೆರೆಯ ಮಾನ್ಯ ಕೌಟುಂಬಿಕ ನ್ಯಾಯಾಲಯದಲ್ಲಿ ನನ್ನ ವಿರುದ್ಧ ವಿವಾಹ ವಿಚ್ಛೇದನೆ ಕೋರಿ ಅರ್ಜಿ ಸಲ್ಲಿಸಿ ಅದರಲ್ಲಿ ನನಗೆ ನೋಟೀಸು ಬಂದಿತ್ತು ಎಂದರೆ ಸರಿ. ನಾನು ಸದರಿ ಪ್ರಕರಣದಲ್ಲಿ ಮೊದಲ ನೋಟಿಸನ್ನು ಸ್ವೀಕರಿಸಿದ್ದರೂ ಸಹ ನ್ಯಾಯಾಲಯಕ್ಕೆ ಹಾಜರಾಗಲಿಲ್ಲ ಎಂದರೆ ಸರಿಯಲ್ಲ. ಹಾಜರಾಗಿದ್ದೆ. ನಾನು ಮೊದಲ ನೋಟಿಸಿಗೆ ನ್ಯಾಯಾಲಯದ ಮುಂದೆ ಹಾಜರಾಗದೇ ಇದ್ದ ಕಾರಣ ನನ್ನನ್ನು ಏಕತರ್ಫಿಯ ಎಂದು ನ್ಯಾಯಾಲಯ ಮಾಡಿದ್ದು 1 ನೇ ಎದುರುದಾರರು ನನಗೆ ಇನ್ನೊಮ್ಮೆ ನೋಟೀಸು ಜಾರಿಯಾಗಲಿ ಎಂದು ನ್ಯಾಯಾಲಯಕ್ಕೆ ಮನವಿ ಮಾಡಿಕೊಂಡ ಮೇರೆಗೆ ನನಗೆ ಇನ್ನೊಂದು ಬಾರಿ ನೋಟೀಸು ಜಾರಿಯಾದಾಗ ನಾನು ನ್ಯಾಯಾಲಯಕ್ಕೆ ಹಾಜರಾಗಿದ್ದೇನೆ ಎದರೆ, ನನಗೆ ನ್ಯಾಯಾಲಯದಿಂದ ಮೂರು ಬಾರಿ ನೋಟೀಸು ಬಂದಿದ್ದು, ಆಗ ನಾನು ಹಾಜರಾಗಿದ್ದೇನೆ ಎಂದು ಸಾಕ್ಷಿ ನುಡಿಯುತ್ತಾರೆ. ನಾನು ನೋಟೀಸು ಬಂದರೂ ಸಹ ಹಾಜರಾಗದೇ ಇದ್ದ ಕಾರಣ 1 ನೇ ಎದುರುದಾರರು ನ್ಯಾಯಾಲಯದ ಮೂಾಲಕ ಸ್ವತಃ ನೋಟಿಸನ್ನು ಜಾರಿ ಮಾಡಲು ಆದೇಶ ಮಾಡಿಸಿಕೊಂಡು ನ್ಯಾಯಾಲಯದ ಸಿಬ್ಬಂಧಿ ಖುದ್ದಾಗಿ ಬಂದು ನನಗೆ ನೋಟೀಸು ಜಾರಿ ಮಾಡಿದ ನಂತರವೇ ನಾನು ಮೇಲೆ ಹೇಳಿದ ಪ್ರಕರಣದಲ್ಲಿ ದಾವಣಗೆರೆ ಮಾನ್ಯ ಕೌಟುಂಬಿಕ ನ್ಯಾಯಾಲಯದ ಮುಂದೆ ಹಾಜರಾಗಿದ್ದೇನೆ ಎಂದರೆ ಸರಿಯಲ್ಲ. 1 ನೇ ಎದುರುದಾರರು ಕೌಟುಂಬಿಕ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ 14 ತಿಂಗಳ ನಂತರ ನಾನು ಅಲ್ಲಿ ಹಾಜರಾಗಿದ್ದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ 1 ನೇ ಎದುರುದಾರರು 5 ಬಾರಿ ರಾಜೀ ಪಂಚಾಯತಿಗಾಗಿ ಮದ್ಧತ್ತುಗಳನ್ನು ತೆಗೆದುಕೊಂಡಿದ್ದರೂ ಸಹ ನಾನು ಒಂದು ಬಾರಿಯೂ ಹಾಜರಾಗಲಿಲ್ಲ ಎಂದರೆ ನನ್ನ ವಕೀಲರು ಹಾಜರಾಗುತ್ತಿದ್ದರು. ಸದರಿ ಪ್ರಕರಣದಲ್ಲಿ ನನ್ನ ಪರವಾಗಿ ವಕೀಲರು ತಕರಾರನ್ನು ಸಲ್ಲಿಸಿಲ್ಲ ಎಂದರೆ ಆ ಬಗ್ಗೆ ವಕೀಲರು ನನಗೆ ತಿಳಿಸಿಲ್ಲ. ನಂತರ ನಾನು ಹಾನಗಲ್ ನ್ಯಾಯಾಲಯಕ್ಕೆ ಪ್ರಕರಣವನ್ನು ವರ್ಗಾವಣೆ ಮಾಡುವಂತೆ ಕೋರಿ ಕೋರಿ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದೆ ಎಂದರೆ ಸರಿ. ನನ್ನ ಅತ್ತೆ ಮಗು ಅಮೀನಾಳನ್ನು ತುಂಬಾ ಹಚ್ಚಿಕೊಂಡಿದ್ದಾರೆ ಎಂದರೆ ಸರಿ. ನಾನೆಂದರೆ ನನ್ನ ಅತ್ತೆಗೆ ತುಂಬಾ ಪ್ರೀತಿ ಎಂದರೆ ಸರಿಯಲ್ಲ. ಎಲ್ಲರ ಒಪ್ಪಿಗೆಯ ಮೇರೆಗೆ ಮಗು ದತ್ತು ತೆಗೆದುಕೊಂಡಿದ್ದೇವೆ ಎಂದರೆ ಎಲ್ಲರೂ ಒಪ್ಪಿರಲಿಲ್ಲ.

6. ದಿನಾಂಕ 28-7-2011, 15-10-2011, 04-01-2012, 18-11-2013 ಮತ್ತು ದಿನಾಂಕ 06-03-2015 ರಂದು ನಾನು ಮಕ್ಕಳಾಗಿಲ್ಲ ಎಂಬ ಕಾರಣಕ್ಕಾಗಿ ದಾವಣಗೆರೆಯ ಡಾ. ಸರ್ವಮಂಗಳಾ ಬಿ ರವರಿಂದ ಚಿಕಿತ್ಸೆ ಪಡೆದುಕೊಂಡಿದ್ದೆ ಎಂದರೆ ಸರಿ. ಸಾಕ್ಷಿಗೆ ಅದಕ್ಕೆ ಸಂಬಂಧಪಟ್ಟ ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಒಪ್ಪಿಕೊಂಡ ಕಾರಣ ನಿ ಆರ್ 1 ರಿಂದ ನಿಆರ್ 5 ಎಂದು ಗುರುತಿಸಲಾಯಿತು. ದಿನಾಂಕ 19-10-2011 ರಂದು ಗುರು ಸ್ಕ್ಯಾನ್ ಸೆಂಟರಿನಲ್ಲಿ ಸ್ಕ್ಯಾನಿಂಗ್ ಮಾಡಿಸಿಕೊಂಡಿದ್ದೇನೆ ಎಂದರೆ ಸರಿ. ಸಾಕ್ಷಿ ಅದಕ್ಕೆ ಸಂಬಂಧಪಟ್ಟ ದಾಖಲೆಯನ್ನು ಗುರುತಿಸಿದ ಕಾರಣ ನಿ ಆರ್ 6 ಎಂದು ಗುರುತಿಸಲಾಯಿತು. ದಿನಾಂಕ 12-11-2011 ರಂದು 13-11-2011 ರಂದು ಮಹಾತ್ಮಾ ಗಾಂಧಿ ಡೈಗ್ನೊಸ್ಟಿಕ್ ದಾವಣಗೆರೆಯಲ್ಲಿ ನಾನು ರಕ್ತ ಪರೀಕ್ಷೆ ಮಾಡಿಕೊಂಡಿದ್ದೇನೆ ಎಂದರೆ ಸರಿ. ಈಗ ನೋಡುತ್ತಿರುವ ದಾಖಲೆಗಳು ಅದಕ್ಕೆ ಸಂಬಂಧಪಟ್ಟಿದ್ದವು ಎಂದರೆ ಸರಿ. ಸದರಿ ದಾಖಲೆಗಳನ್ನು ನಿ ಆರ್ 7 ಮತ್ತು 8 ಎಂದು ಗುರುತಿಸಲಾಯಿತು. ನಾನು ಮಕ್ಕಳಾಗದೇ ಇದ್ದ ಕಾರಣಕ್ಕಾಗಿ ದಾವಣಗೆರೆಯ ಸಿಟಿ ಮೆಡಿಕಲ್ ಸೆಂಟರ್ ನಲ್ಲಿ ಚಿಕಿತ್ಸೆ ಪಡೆದಿದ್ದೇನೆ ಎಂದರೆ ಸರಿ. ಅದಕ್ಕೆ ಸಂಬಂಧಪಟ್ಟ ದಾಖಲೆಯನ್ನು ಈಗ ನೋಡುತ್ತಿದ್ದು ನಿ ಆರ್ 9 ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ಎರಡು ದಾಖಲೆಗಳು ಥೈರಾಡಿಗೆ ಸಂಬಂಧಿಸಿದಂತೆ ವೈದ್ಯಕೀಯ ತಪಾಸಣೆಗೆ ಒಳಪಟ್ಟ ಬಗ್ಗೆ ವರದಿಗಳು ಎಂದರೆ ಸರಿ. ಸದರಿ ದಾಖಲೆಗಳನ್ನು ನಿ ಆರ್ 10 ಮತ್ತು ನಿ ಆರ್ 11 ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ದಾಖಲೆಗಳು 2012 ರಲ್ಲಿ ವಿನಾಯಕ ಹಾಸ್ಪಿಟಲ್ ದಾವಣಗೆರೆಯಲ್ಲಿ ರಕ್ತ ಪರೀಕ್ಷೆ ಮಾಡಿಸಿದ ಬಗ್ಗೆ ಆಗಿವೆ ಎಂದರೆ ಸರಿ. ಸದರಿ ದಾಖಲೆಗಳನ್ನು ನಿ ಆರ್ 12 ಮತ್ತು ನಿ ಆರ್ 13 ಎಂದು ಗುರುತಿಸಲಾಯಿತು. ನಾನು ಮಕ್ಕಳಾಗುವ ಬಗ್ಗೆ ಕೌಮುದಿ ನರ್ಸಿಂಗ್ ಹೋಮ್ ಶಿರಸಿಯಲ್ಲಿ ಚಿಕಿತ್ಸೆ ಪಡೆದಿದ್ದೇನೆ ಎಂದರೆ ಸರಿ. ಈಗ ನೋಡುತ್ತಿರುವ ದಾಖಲೆ ಅದಕ್ಕೆ ಸಂಬಂಧಪಟ್ಟಿದ್ದು ಎಂದರೆ ಸರಿ. ಅದನ್ನು ನಿ ಆರ್ 14 ಎಂದು ಗುರುತಿಸಲಾಯಿತು.

7. ಈಗ ನೋಡುತ್ತಿರುವ ದಾಖಲೆಗಳು ನನಗೆ ಅಲರ್ಜಿ ಸಮಸ್ಯೆ ಇರಬಹುದು ಎಂಬ ಕಾರಣಕ್ಕಾಗಿ 2013 ರಲ್ಲಿ ಡಾ.ಬಿ ವಿದ್ಯಾಸಾಗರ ದಾವಣಗೆರೆ ರವರಿಂದ ಚಿಕಿತ್ಸೆ ಪಡೆದುಕೊಂಡ ಬಗ್ಗೆ ಆಗಿವೆ ಎಂದರೆ ಸರಿ. ಸದರಿ 5 ಪುಟಗಳ ದಾಖಲೆಯನ್ನು ಒಟ್ಟಾಗಿ ನಿ ಆರ್ 15 ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ದಾಖಲೆಗಳು ನಾನು

ಮುಂಬೈ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ಆಗಿವೆ ಎಂದರೆ ಸರಿ. ಸಾಕ್ಷಿ ಆ ಬಗ್ಗೆ 3 ಪುಟಗಳುಳ್ಳ ದಾಖಲೆಯನ್ನು ನೋಡಿ ಗುರುತಿಸಿದ್ದು ಅದನ್ನು ಒಟ್ಟಾಗಿ ನಿ ಆರ್ 16 ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ಅಲ್ಲಿ ಚಿಕಿತ್ಸ ಪಡೆದ ಬಗ್ಗೆ ಖರ್ಚು ವೆಚ್ಚವನ್ನು ನನ್ನ ಕಾಕಾ ನೋಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಈಗ ನೋಡುತ್ತಿರುವ 4 ಫ್ಲೈಟ್ ಟಿಕೇಟುಗಳು ನಾನು ಮತ್ತು 1 ನೇ ಎದುರುದಾರರು ಹಜ್ ಯಾತ್ರೆಗೆ ಹೋದ ಬಗ್ಗೆ ಆಗಿವೆ ಎಂದರೆ ಸರಿ. ಸದರಿ ಟಿಕೇಟುಗಳನ್ನು ಕ್ರಮವಾಗಿ ನಿ ಆರ್ 17 ರಿಂದ ನಿ ಆರ್ 20 ಎಂದು ಗುರುತಿಸಲಾಯಿತು.

(ಎದುರುದಾರ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್